ಮಾಡಿದ್ದಾರೆ ಆ ಬಗ್ಗೆ ನಾನು ಪರಿಶೀಲನೆ ಮಾಡಿ ಏನು ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕೋ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

14) ವಿಷಯ : ರಾಯಚೂರು ಜಿಲ್ಲೆಯ ಲಿಂಗಸಗೂರಿನಲ್ಲಿ ಮತ್ತು ಮನೆಯಲ್ಲಿ ಸಿಡಿಲು ಬಡಿದು ಒಂದೇ ಕುಟುಂಬದಲ್ಲಿ ಮೂರು-ಮೂರು ಜನ ಸತ್ತಿರುವ ಬಗ್ಗೆ.

(ಗೊಂದಲ)

ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಇದೇ ವಿಷಯದ ಬಗ್ಗೆ ಶೂನ್ಯ ವೇಳೆಯಲ್ಲಿ ರಾಯಚೂರು ಜಿಲ್ಲೆಯ ಲಿಂಗಸಗೂರಿನಲ್ಲಿ ಮತ್ತು ಮಸ್ಕಿಯಲ್ಲಿ ಸಿಡಿಲು ಬಡಿದು ಒಂದು ಕುಟುಂಬದಲ್ಲಿ ಮೂರು-ಮೂರು ಜನ ಸತ್ತಿದ್ದಾರೆ ಎಂದು ಹೇಳಿದ್ದರು. ಅದರಲ್ಲಿ ವಯಸ್ಸಾಗದೆ ಇರುವವರಿಗೆ 14 ವರ್ಷ ಮತ್ತು ಅದರಿಂದ ಕೆಳಗಡೆ ಇರುವವರಿಗೆ ಕೊಟ್ಟಿಲ್ಲವೆಂದು ಹೇಳಿದ್ದರು. ನಾನು ತಕ್ಷಣ ರಾಯಚೂರು ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ, ಅವರಿಗೂ ಕೂಡ ಭಾರತ ಸರ್ಕಾರದ ರಾಷ್ಟ್ರೀಯ ಭದ್ರತಾ ಯೋಜನೆ ಅಡಿಯಲ್ಲಿ ತಕ್ಷಣ ಹಣ ಬಿಡುಗಡೆ ಮಾಡಿದ್ದೇವೆ. ಮಾನ್ಯ ರೇವಣ್ಣರವರು ಹೇಳಿದ ಬಗ್ಗೆಯೂ ಅಷ್ಟೇ ಅನುಕಂಪದ ಆಧಾರದ ಮೇಲೆ ಹಣ ಬಿಡುಗಡೆ ಮಾಡುತ್ತೇವೆ. ದುಡ್ಡಿಗೇನೂ ಕೊರತೆ ಇಲ್ಲ. ಅದನ್ನು ಬಿಡುಗಡೆ ಮಾಡಿಸಿ ಕೊಡುತ್ತೇವೆ.

15) ವಿಷಯ : ವೈದ್ಯರನ್ನು ನೇಮಿಸುವ ಬಗ್ಗೆ.

ಶ್ರೀ ಶಿವಾನಂದ ಎಸ್.ಪಾಟೀಲ್ (ಬಸವನಬಾಗೇವಾಡಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಇಡೀ ಬಿಜಾಪುರ ಜಿಲ್ಲೆಯಲ್ಲಿ ಖಾಲಿ ಇರತಕ್ಕಂತಹ ವೈದ್ಯರ ಅಂಕಿ ಸಂಖ್ಯೆ ತಮ್ಮಲ್ಲಿರಬಹುದು. ವಿಶೇಷವಾಗಿ ನಮ್ಮ ಬಸವನ ಬಾಗೇವಾಡಿಯಲ್ಲಿ 14 ಜನ ವೈದ್ಯರು ಬೇಕಾಗಿತ್ತು. ಅದರಲ್ಲಿ 11 ಜನ ಇಲ್ಲ. ಉಳಿದಿರತಕ್ಕಂತಹ ಮೂರು ಜನ ಕೂಡ ಒಂದು ದಿವಸ ಬರುತ್ತಾರೆ, ಒಂದು ದಿವಸ ಬರುವುದಿಲ್ಲ. ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ನಿಡಗುಂದಿ ಪ್ರಾಥಮಿಕ ಆರೋಗ್ಯ ಕೇಂದ್ರ ಎಂದು ಇದೆ. ಅಲ್ಲಿ ಐದು ಜನ ವೈದ್ಯರಲ್ಲಿ ಒಬ್ಬರೂ ಇಲ್ಲ. ಹೀಗಾದರೆ ಆಸ್ಪತ್ರೆ ಹೇಗೆ ನಡೆಯಲಿಕ್ಕೆ ಸಾಧ್ಯವಿದೆ ಎಂದು ತಾವು ಸ್ವಲ್ಪ ತಿಳಿಸಬೇಕು. ಜೊತೆಗೆ ವೈದ್ಯಾಧಿಕಾರಿಗಳನ್ನು Posting ಮಾಡುವುದಕ್ಕೆ ತಾವು counseling

ಮಾಡುತ್ತಿದ್ದೀರಿ. ಇದೇನು teachers transfers ಅಲ್ಲ. counseling ಮಾಡಿದರೆ ಇರುವ ವೈದ್ಯರೇ ಸಿಗುವುದಿಲ್ಲ. ಖಾಲಿ ಹುದ್ದೆಗಳು ಸಾಕಷ್ಟು ಇವೆ. ಅದರಲ್ಲಿ ನೀವು counseling ಮಾಡತಕ್ಕಂತಹ ಪದ್ಧತಿ ಇಟ್ಟುಕೊಂಡು ಹೋದರೆ, ಆಸ್ಪತ್ರೆಗಳನ್ನು ನಡೆಸುವುದು ಬಹಳ ಕಷ್ಟವಾಗುತ್ತದೆ. ಇದನ್ನು ತಾವು ಮರುಪರಿಶೀಲನೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಬಸವನ ಬಾಗೇವಾಡಿ ಸಾರ್ವಜನಿಕ ಆಸ್ಪತ್ರೆಯಲ್ಲಿ 10 ತಜ್ಞ ವೈದ್ಯರ ಮತ್ತು ಒಂದು ದಂತ ವೈದ್ಯರ ಹುದ್ದೆ ಮಂಜೂರಾಗಿದ್ದು ಈ ಪೈಕಿ ಮೂರು ಜನ ತಜ್ಞ ಮೂರು ವೈದ್ಯರು ಜನ ದಂತ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇನ್ನಿತರ ಮಕ್ಕಳ ತಜ್ಞರು, ಕೀಲು ಮೂಳೆ ತಜ್ಞರು ಹಾಗೂ ಜನರಲ್ ಏಳು ತಜ್ಞ ವೈದ್ಯರ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ, ವೈದ್ಯಾಧಿಕಾರಿಗಳ ನೇಮಕಕ್ಕೆ ಈಗಾಗಲೇ ಜಿಲ್ಲಾ ಮಟ್ಟದ DHO ರವರಿಗೆ ಅಧಿಕಾರ ಕೊಟ್ಟು ಅಲ್ಲಿರುವಂತಹ ವೈದ್ಯರನ್ನು contract basis ನಲ್ಲಿ ಆಯ್ಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ಈ ಸಮಸ್ಯೆ ಇದ್ದ ಕಾರಣ ಈಗಾಗಲೇ ಒಂದು Act ಪಾಸ್ ಮಾಡಿದ್ದೇವೆ ಈ ಸಮಸ್ಯೆ ಪರಿಹಾರವಾಗುತ್ತದೆ. ಮಾನ್ಯ ಶಾಸಕರು ಈ counseling ಮಾಡುವ ಸಂದರ್ಭದಲ್ಲಿ ಸಮಸ್ಯೆಯಾಗಿದೆ ಎಂದು ಹೇಳಿದರು. ನಾವು ಇದರ ಬಗ್ಗೆ ಬಹಳಷ್ಟು ಆಲೋಚನೆ ಮಾಡಿದಾಗ ಈ ಹಿಂದೆ ನಿಯೋಜನೆ ಮಾಡುತ್ತಿದ್ದ ಸಂದರ್ಭದಲ್ಲಿ ಕೂಡ ಇಂಥದ್ದೇ ಸಮಸ್ಯೆ ಬಹಳಷ್ಟು ಕಡೆ ಇತ್ತು. ಒಮ್ಮೆ ನಿಯೋಜನೆಗೆ ಎಂದು ತೆಗೆದುಕೊಂಡು ಹೋದರೆ ಬೇರೆ ಬೇರೆ ಶಿಫಾರಸ್ಸು ಹಾಗೂ ಒತ್ತಡಗಳ ಮೂಲಕ ನಗರ ಪ್ರದೇಶಗಳಿಗೆ ಸೀಮಿತವಾಗಿ ಡಾಕ್ಟರ್‌ಗಳು ಹೋಗುತ್ತಾರೆ ಹೊರತು ಗ್ರಾಮೀಣ ಪ್ರದೇಶಗಳಿಗೆ ಹೋಗುವುದಿಲ್ಲ. ಆದಕಾರಣ ಇವತ್ತು ಬರೀ counseling ಮಾತ್ರವಲ್ಲ ಮೊನ್ನೆ counseling ಯಾವ ರೀತಿ ಮಾಡಿದ್ದಾರೆಂದರೆ, critical area ದಲ್ಲಿ ಎಲ್ಲಿ 50% ಗಿಂತ ಕಡಿಮೆ ಇದೆ ಆ ಪ್ರದೇಶಗಳಿಗೆ ಪ್ರಥಮ ಆದ್ಯತೆ ಮೇಲೆ ಕೊಡುವಂತಹ ಕೆಲಸ ಆಗಿ ಮೊನ್ನೆ ತಾನೆ ಸುಮಾರು 59 ಜನ ಬೇರೆ ಬೇರೆ ಕಡೆ ಸೇರಿದ್ದಾರೆ. ಮುಂದಿನ ದಿನಗಳಲ್ಲಿ